ಗಮನಕ್ಕೆ ಬಂದಾಗ, ಇಲಾಖೆ ವಿಚಾರಣೆ ನಡೆಸಿದ್ದು, ಆ ಸಂಸ್ಥೆಯಲ್ಲಿ ಆಗ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದು ಶ್ರೀ ಆರ್.ಜಯರಾಮ, ಇವರು ರೂ. 16,514-00 ಹಣವನ್ನು ಸರ್ಕಾರಕ್ಕೆ ನಷ್ಟು ಉಂಟುಮಾಡಿರುವುದು ಸಾಬೀತಾಗಿದ್ದು, ಅವರಿಂದ ಈ ಹಣವನ್ನು ಸರ್ಕಾರಕ್ಕೆ ಪಡೆಯಲಾಗಿದೆ. ಅಲ್ಲದೇ, ವಿದ್ಯುತ್ ವಿಭಾಗದ ಉಪನ್ಯಾಸಕರಾಗಿದ್ದು ಶ್ರೀ ಕೆ.ವಿ. ನಂಜುಂಡೇಗೌಡ ಅವರಿಂದ ಕೂಡಾ ರೂ. 8,257-00 ಹಣ. ವಸೂಲಿ ಮಾಡಲು ಕ್ರಮ ಜರುಗಿಸವ ಸಂದರ್ಭದಲ್ಲಿ ಅವರು ಕರ್ನಾಟಕ ಆಡಳಿತ ಮಂಡಲಿಯಲ್ಲಿ ಅರ್ಜಿ ಸಲ್ಲಿಸಿ, ಸರ್ಕಾರದ ಆದೇಶವನ್ನು ಪ್ರಶ್ನಿಸಿದ ಮೇರೆಗೆ, ಕರ್ನಾಟಕ ಆಡಳಿತ ಮಂಡಲಿಯವರು, ಸರ್ಕಾರದ ಆದೇಶವನ್ನು ಅನೂರ್ಜಿತಗೊಳಿಸಿದ್ದು, ಈ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.

ಕಛೇರಿಯ ಸಿಬ್ಬಂದಿಯವರಾದ ಶ್ರೀ ಟಿ. ರಾಮಕೃಷ್ಣಯ್ಯ ಹಾಗೂ ಶ್ರೀ ಹೆಚ್.ಎಲ್. ರಾಮಕೃಷ್ಣ ಇವರುಗಳನ್ನು ಆರೋಪಗಳಿಂದ ವಿಮುಕ್ತಿಗೊಳಿಸಲಾಗಿದೆ.

2) ತಾಂತ್ರಿಕ ನಿರ್ದೇಶನಾಲಯದ ನಗರ ವಿಭಾಗದಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ :

ರೂ. 1,36,440-75 ಹಣ ಸ್ಕೂಲ್ ಆಫ್ ಪ್ರಿಂಟಿಂಗ್, ಬೆಂಗಳೂರು ಇಲ್ಲಿಗೆ ಜಮಾ ಆಗಬೇಕಾಗಿದ್ದು, ಅದು ಜಮಾ ಆಗಿದೆ ಎಂದು ನಗದು ಪುಸ್ತಕದಲ್ಲಿ ಖರ್ಚು ಹಾಕಲಾಗಿದ್ದು, ಇದು ಜಮಾ ಆಗಿಲ್ಲವೆಂದು ಸ್ಕೂಲ್ ಆಫ್ ಪ್ರಿಂಟಿಂಗ್‌ನ ಪ್ರಾಂಶುಪಾಲರು, ಗಮನಕ್ಕೆ ತಂದಾಗ, ಶ್ರೀ ಎಂ. ನಾಗರಾಜ, ನಗದಿ ಗುಮಾಸ್ತರು ಇವರನ್ನು ದಿನಾಂಕ 4-6-90 ರಿಂದ ವಿಚಾರಣೆಯನ್ನು ಪೆಂಡಿಂಗ್ ಇಟ್ಟು, ನಿಲಂಬನೆಯಲ್ಲಿಡಲಾಗಿದೆ. ಮೇಲ್ನೋಟಕ್ಕೆ ರುಜುವಾತಾಗಿ ಕಂಡು ಬಂದ ಕೆಲವು ಆರೋಪಗಳ ಬಗ್ಗೆ ಹಿಂದಿನ ಲೆಕ್ಕಾಧಿಕಾರಿಗಳ ವರದಿಯ ಮೇರೆಗೆ ಇಲಾಖಾ ತನಿಖೆ ನಡೆಸಲು ಆಜ್ಞಾಪಿಸಲಾಗಿದೆ. ವಿಚಾರಣೆ ಮುಂದುವರಿದಿದ್ದು, ಅದರ ವರದಿಯನ್ನು ನಿರೀಕ್ಷಿಸಲಾಗಿದೆ. ಇಂತಹ ಅವ್ಯವಹಾರದ ಇನ್ನೂ ಕೆಲವು ಪ್ರಕರಣಗಳು ಇರಬಹುದೆಂದು, ಶಂಕಿಸಿ, ವಿಶೇಷ ಆಡಿಟ್ ಮಾಡಲು ಮಹಾಲೇಖಪಾಲಕರಿಗೆ ತಿಳಿಸಿದ್ದು, ಮಹಾಲೇಖಪಾಲಕರ ಆಡಿಟ್ ವರದಿಯನ್ನು ನಿರೀಕ್ಷಿಸಲಾಗಿದೆ. ಮಹಾಲೇಪಾಲಕರ ವರದಿ ಬಂದ ನಂತರ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಯ್ಯದ್ ಗಫಾರ್, ಶ್ರೀ ಎಸ್.ಎಂ. ಗುರುಲಿಂಗಸ್ವಾಮಿ ಮತ್ತು ಶ್ರೀ ಟಿ.ಆರ್.ಶ್ರೀನಿವಾಸರಾವ್, ಕ್ರಮವಾಗಿ ದಿನಾಂಕ 15-9-87ರ ವರೆವಿಗೆ 18-9-87ರಿಂದ 30-6-88ರ ವರೆವಿಗೆ, ದಿನಾಂಕ 1-7-88 ರಿಂದ 13-6-90ರ ವರೆವಿಗೆ, ಅಧೀಕ್ಷಕರಾಗಿ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಇವರ ಪೈಕಿ ಶ್ರೀ ಸಯ್ಯದ್ ಗಫಾರ್ ರವರು ದಿನಾಂಕ 13-11-88ರಂದು ನಿಧನಹೊಂದಿದ್ದಾರೆ. ಉಳಿದ ಇಬ್ಬರನ್ನು ಅಮಾನತ್ತಿನಲ್ಲಿಡಲಾಗಿದೆ.

3) ಪ್ರಥಮ ಬಿ.ಇ, ಎಂ.ಬಿ.ಬಿ.ಎಸ್. ಸಾಮಾನ್ಯ ಪರೀಕ್ಷೆಗೆ ವಸೂಲಿ ಮಾಡಿದ ಹಣದ ಕುರಿತು :

ಈ ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ಸರ್ಕಾರಿ ಆದೇಶ ಸಂ : ಇಡಿ ಟಿಇಸಿ 84, ದಿನಾಂಕ 21-6-84ರ ಪ್ರಕಾರ, ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸದಸ್ಯ-ಕಾರ್ಯದರ್ಶಿಯಾಗಿ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಮತ್ತು ಇನ್ನಿತರ ಸದಸ್ಯರ ನೇತೃತ್ವದಲ್ಲಿ ನಡೆಸಲಾಗುತ್ತಿದ್ದು, ಈ ಸಮಿತಿಯ ಆದೇಶಾನುಸಾರ ಸದಸ್ಯ-ಕಾರ್ಯದರ್ಶಿಯವರು, ಈ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ತಗಲುವ ಖರ್ಚು ವೆಚ್ಚಗಳನ್ನು ಮಾಡಲು ಅಧಿಕಾರ ಪಡೆದಿದ್ದಾರೆ. ರಾಜ್ಯ ಲೆಕ್ಕ ಪತ್ರ ಇಲಾಖೆಯ ಅಧಿಕಾರಿಗಳಿಂದ ಇಂಟರನಲ್ ಆಡಿಟ್ ಆಗಿಂದ್ದಾಗ್ಗೆ ಮಾಡಿಸಲಾಗಿದೆ.

ಈ ಸಮಿತಿಯು ಅತ್ಯುನ್ನತ ಸಮಿತಿಯಾಗಿದ್ದು, ಈ ಪರೀಕ್ಷೆಗಳ ಸಂಬಂಧದಲ್ಲಿ ವಸೂಲಿ ಮಾಡಿದ ಹಣದ ಅವ್ಯವಹಾರದ ಬಗ್ಗೆ ಯಾವುದೇ ನಿರ್ದಿಷ್ಟವಾದ ದೂರು ಸರ್ಕಾರಕ್ಕೆ ಬಂದಿಲ್ಲ. ಒಂದು ವೇಳೆ, ನಿರ್ದಿಷ್ಟವಾದ ದೂರು ಆ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಬಂದರೆ, ಅವುಗಳ ಬಗ್ಗೆ ತನಿಖೆ ಮಾಡಿಸಲಾಗುವುದು.

4. ಸರ್ಕಾರಿ ಎಸ್.ಜಿ. ಪಾಲಿಟೆಕ್ನಿಕ್, ಬೆಂಗಳೂರು, ಇಲ್ಲಿನ ಕೆಮಿಕಲ್ ವಿಭಾಗಕ್ಕೆ ಉಪಕರಣಗಳನ್ನು ಖರೀದಿಸುವಲ್ಲಿ ಅವ್ಯವಹಾರ ಆಗಿದೆ ಎಂಬ ಆಪಾದನೆಯ ಬಗ್ಗೆ

ಈ ವಿಷಯದ ಬಗ್ಗೆ ಪೂರ್ವಭಾವಿ ತನಿಖೆಯನ್ನು ಮಾಡಲು ನಿರ್ದೇಶನಾಲಯ ಉಪ ನಿರ್ದೇಶಕರೊಬ್ಬರನ್ನು ನೇಮಿಸಲಾಯಿತು. ಅವರು ಕೊಟ್ಟ ವರದಿಯಂತೆ ಕೆಮಿಕಲ್ ಇಂಜಿನಿಯರಿಂಗ್ ವಿಷಯದಲ್ಲಿ ಪರಿಣಿತರನ್ನು ನೇಮಿಸಿ, ಪೂರ್ಣ ವರದಿಯನ್ನು ಪಡೆಯಲಾಯಿತು. ಇವರ ವರದಿ ಪ್ರಕಾರ, ಖರೀದಿಸಿರುವ ಉಪಕರಣಗಳ ಬೆಲೆ ಮಾರುಕಟ್ಟೆಯ ಬೆಲೆಗಿಂತ ಬಹಳ ಜಾಸ್ತಿ ಇದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಉಪಕರಣಗಳನ್ನು ಎಸ್.ಪಿ.ಡಿ. ಮೂಲಕ ಖರೀದಿಸಿರುವುದರಿಂದ ವಿಚಾರಣೆಯನ್ನು ಸ್ವತಂತ್ರ ಪ್ರಾಧಿಕಾರ ಹೊಂದಿರುವ ಲೋಕಾಯುಕ್ತದ ತನಿಖೆಗೆ ಒಳಪಡಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷಣಿಯವರೇ, ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಅವರ ಹೇಳಿಕೆಯಲ್ಲಿ ಅಕೌಂಟೆಂಟ್ ಜನರಲ್‌ರವರ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಹೇಳಿದರು. ನನ್ನ ಕೈಯಲ್ಲಿದೆ.

ಈಗಿರುವ ಮಾಹಿತಿ ಪ್ರಕಾರ ನಿಮಗೆ ಮೊನ್ನೆ ಬಂತು, ನನಗೆ ನಿನ್ನೆ ತಲುಪಿತು. ರಾತ್ರಿ ನಾನು ಎಲ್ಲಾ ಒಟ್ಟಿಗೆ ಲೆಕ್ಕ ಮಾಡಿದೆ. 53 ಲಕ್ಷ ರೂಪಾಯಿಯ ಅವ್ಯವಹಾರ ಆಗಿದೆ. ಇದಕ್ಕೆ ನೇರವಾಗಿ ಸಂಬಂಧಪಟ್ಟವರಲ್ಲಿ ಕೇವಲ ಇಬ್ಬರನ್ನು ಮಾತ್ರ ತಾವು ಅಮಾನತ್ತಿನಲ್ಲಿಟ್ಟಿದ್ದೀರಿ. ಎಸ್.ಎಂ.ಗುರುಲಿಂಗಸ್ವಾಮಿ, ಕ್ಯಾಷ್ ಸೂಪರಿಂಟೆಂಡೆಂಟ್, ಕೆ.ಆರ್. ಶ್ರೀನಿವಾಸರಾವ್, ಕ್ಯಾಷ್ ಸೂಪರಿಂಟೆಂಡೆಂಟ್. ಇದಕ್ಕಿಂತಲೂ ದೊಡ್ಡದಾಗಿ ನೇರ ಸಂಬಂಧ ಇದ್ದವರು ಇನ್ನೂ ಮೂರು ಜನ ಇದ್ದಾರೆ. ಅದರಲ್ಲಿ ಬಹಳ ಮುಖ್ಯವಾಗಿ ಮಾಡಿದವರು ಈಗ ನಿವೃತ್ತರಾಗಿದ್ದಾರೆ. ಬಿ.ಎನ್.ಕೃಷ್ಣಮೂರ್ತಿ, ಫಾರ್ಮರ್‌ಲಿ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್, ಎರಡನೆಯವರು ಎಂ.ನಾಗರಾಜರಾವ್, ಡೆಪ್ಯುಟಿ ಡೈರೆಕ್ಟರ್, ಮೂರನೆಯವರು ರಂಗಸ್ವಾಮಿಗೌಡ, ಕೆಮಿಕಲ್ ಇಂಜಿನಿಯರ್ ವಿಭಾಗ, ಇನ್ನೊಬ್ಬರು ಕೆ.ವಿ.ನಂಜುಂಡೇಗೌಡ, ಎಸ್.ಜೆ.ಪಾಲಿಟೆಕ್ನಿಕ್, ಬೆಂಗಳೂರು. ಈ 53 ಲಕ್ಷ ರೂಪಾಯಿಯ ದುರುಪಯೋಗದಲ್ಲಿ ಇವರೆಲ್ಲರೂ ಭಾಗಿಗಳಾಗಿದ್ದಾರೆ. ಇವರನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು. ನಿವೃತ್ತಿಯಾಗಿರುವಂಥ ಕೃಷ್ಣಮೂರ್ತಿಯ ಬಗ್ಗೆಯೂ ತಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಇದು ನನ್ನ ಒತ್ತಾಯ. ಇದರ ಬಗ್ಗೆ ತಾವು ಏನು ಮಾಡುತ್ತೀರಿ?

+ ಶ್ರೀ ಹೆಚ್. ವಿಶ್ವಾಂತಯ್ಯ : ನಾನು ನಿನ್ನೆ ದಿವಸ ಭಾಷಣ ಮಾಡಬೇಕಾದರೆ ಇದರ ಬಗ್ಗೆ ಪ್ರಸ್ತಾಪ ಮಾಡಿದೆ. ಆಡಿಟ್ ರಿಪೋರ್ಟ್ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ, ಈ ಆಡಿಟ್ ರಿಪೋರ್ಟ್ ಬರುವುದಕ್ಕಿಂತ ಮುಂಚೆ ಆಡಿಟ್ ಎನ್‌ಕ್ವೈರಿ ಏನು ಮಾಡುತ್ತಾರೆ ಆಗ ಎ.ಜಿ.ಯವರ ಪಾರ್ಟಿಯವರು ಸಂಬಂಧಪಟ್ಟಂಥ ಇಲಾಖೆಯ ಮುಖ್ಯಸ್ಥರಿಗೆ ಅಥವಾ ಕಛೇರಿಯ ಮುಖ್ಯಸ್ಥರಿಗೆ ಇದರ ವರದಿಯನ್ನು ಕೊಡುತ್ತಾರೆ. ಹೌದಾ ಸ್ವಾಮಿ? ಅದು ತಮಗೆ ಮಾಹಿತಿ ಬಂದ ಹಾಗೆ ಅಲ್ಲವೇ? ಅವರು ಕೊಟ್ಟಂಥ ಮಾಹಿತಿ ಪ್ರಕಾರ, 45ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣ